# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
## ವಾರ್ಡ್ ಸಮಿತಿ ಸಭೆ, ದಿನಾಂಕ:10-05-2022 ರ ಸಭಾ ನಡವಳಿಗಳು

ದಿನಾಂಕ: 10-05-2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್-79 ಸರ್ವಜ್ಞನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಂ.ಎಂ.ರಸ್ತೆಯಲ್ಲಿರುವ ಪಾಲಿಕೆಯ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್.ಡಬ್ಲ್ಯೂ.ಎ

1. ಶ್ರೀ. ಶ್ರೀ.ಮುರಳಿ ಆರ್.ಡಬ್ಲ್ಯೂ.ಎ
2. ಶ್ರೀನಾರಾಯಣ ಸ್ವಾಮಿ ಆರ್.ಡಬ್ಲ್ಯೂ.ಎ
3. ಶ್ರೀ.ಸಂಜೋಗ್ ಆರ್.ಡಬ್ಲ್ಯೂ.ಎ
4. ಶ್ರೀಮತಿ.ಅರುಣಾ ಬಾಲು ಆರ್.ಡಬ್ಲ್ಯೂ.ಎ
5. ಶ್ರೀ.ಪದ್ಮನಾಭ ಆರ್.ಡಬ್ಲ್ಯೂ.ಎ

ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು

1. ಶ್ರೀ.ಡಾ॥ಮಹಮೂದ್ ಅಬ್ಬಾಸ್ ನೋಡೆಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
2. ಶ್ರೀ.ನರಸಿಂಹಯ್ಯ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
3. ಶ್ರೀ.ರಾಮಯ್ಯ ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀಮತಿ.ದಿವ್ಯ ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ.ಮುನಿ ಯೆಲ್ಲಪ್ಪ, ಕಂದಾಯ ವಸೂಲಿಗಾರರು
6. ಶ್ರೀ.ಮಲ್ಲಣ್ಣ, ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲಾ ಇಲಾಖೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಸಭೆಯಲ್ಲಿ ತಿಳಿಸಲು ಕೋರಿ ಸಭೆಯನ್ನು ಆರಂಭಿಸಲಾಯಿತು.

ಸಭೆಯಲ್ಲಿ ಚರ್ಚಿಸಿದ ವಿಷಯಗಳು:-

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | ಘನತ್ಯಾಜ್ಯ ನಿರ್ವಹಣೆ (SWM) | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ಹೆಚ್ಚಾಗಿದ್ದು, ಸಮರ್ಪಕವಾಗಿ ಕಸ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು. | Junior Health Inspector |
| | ಕಾಮಗಾರಿ ಇಲಾಖೆ (Engineering) | |
| 2 | ➢ ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸುವುದು.<br>➢ ಪಿ.ಎಸ್.ಕೆ.ನಾಯ್ಡು ರಸ್ತೆಯ ಪುಟ್‌ಪಾತ್‌ನಲ್ಲಿ ಡೆಬ್ರಿಸ್‌ನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer-BBMP |
| | ಬೆಂಗಳೂರು ಜಲ ಮಂಡಳಿ (BWSSB) | |
| 3 | ➢ ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಒಳಚರಂಡಿ ಪೈಪ್‌ಲೈನ್‌ಗಳನ್ನು ಅಳವಡಿಸುವುದರ ಬಗ್ಗೆ ಕಿರಿಯ ಅಭಿಯಂತರರಾದ ಶ್ರೀ.ಲೋಹಿತ್ ರವರು ತಿಳಿಸಿದರು.<br>➢ ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಒತ್ತಡವನ್ನು ಹೆಚ್ಚಿಸಿ ನೀರನ್ನು ಸಮರ್ಪಕವಾಗಿ ಒದಗಿಸಲು ಕೋರಲಾಯಿತು. | Assistant Engineer-BWSSB |

| | | |
|---|---|---|
| ಬೃಹತ್ ನೀರುಗಾಲುವೆ (SWD Dept) | | |
| 4 | ➢ ಹೊಸ ಬೈಯ್ಯಪ್ಪನಹಳ್ಳಿ, ಬಂಡಪ್ಪ ಕಾಲೋನಿ ಮತ್ತು ಸುತ-ಮುತ್ತಲಿನ ಪ್ರದೇಶಗಳಲ್ಲಿರುವ ಬೃಹತ್ ನೀರುಗಾಲುವೆಯಲ್ಲಿ ತುಂಬಿರುವ ಹೂಳನ್ನು ತಗೆಯಲು ತಿಳಸಲಾಯಿತು.<br>➢ ಪಿ.ಎಸ್.ಕೆ.ನಾಯ್ಡು ರಸ್ತೆ, ಕಾಲೇಮ್ಮ ದೇವಸ್ಥಾನ ಹಿಂಭಾಗದಲ್ಲಿ ಹಾಲೀ ಇರುವ ಬೃಹತ್ ನೀರುಗಾಲುವೆಯ ಗೋಡೆಗಳಗೆ ಪಾಯಿಟಿಂಗ್ ಮಾಡಲು ಸೂಚಿಸಿದರು. | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ |
| ಬಿ.ಬಿ.ಎಂ.ಪಿ ಸ್ಟ್ರೀಟ್‌ಲೈಟ್ಸ್ (Street Lights) | | |
| 5 | ➢ ವಾರ್ಡ್ ವ್ಯಾಪ್ತಿಯಲ್ಲಿ ಅನೇಕ ಕಡೆಗಳಲ್ಲಿ ಬೀದಿ ದೀಪಗಳು ಇಲ್ಲದೇ ಇರುವುದಿಲ್ಲವಾದ್ದರಿಂದ ಕೂಡಲೇ ಸದರಿ ರಸ್ತೆಗಳಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಸೂಚಿಸಲಾಯಿತು. | Assistant Engineer-Street Lights |
| ಪೋಲೀಸ್ ಇಲಾಖೆ, ಕಾ&ಸು (POLICE DEPARTMENT) | | |
| 6 | ➢ ವಾರ್ಡ್ ವ್ಯಾಪ್ತಿಯಲ್ಲಿ ರಾತ್ರಿ ಹಾಗೂ ಹಗಲು ಪಾಳಯಲ್ಲಿ ಬೀಟ್ ಪೋಲೀಸರನ್ನು ನಿಯೋಜಿಸಿ ಸಾರ್ವಜನಿಕರಿಗೆ ಸೂಕ್ತ ರಕ್ಷಣೆಯನ್ನು ನೀಡಲು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಹಿಂದಿನ ಸಭೆಯಲ್ಲಿ ಕೋರಿದರು ಇದಕ್ಕೆ ಸಂಬಂಧಿಸಿದಂತೆ. ಈಗಾಗಲೇ ಬೀಟ್ ಪೋಲೀಸರನ್ನು ರಾತ್ರಿಪಾಳಯಲ್ಲಿ ನಿಯೋಜಿಸಲಾಗಿದ್ದು ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೋಲೀಸರು ತಿಳಸಿದರು.. | Police Departmrnt |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ. ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಸಿದರು.

ಕಾರ್ಯದರ್ಶಿಗಳು
ಶ್ರೀ.ನರಸಿಂಹಯ್ಯ
ಸಹಾಯಕ ಅಭಿಯಂತರರು(ಪ್ರಭಾರ)
ವಾರ್ಡ್ ಸಂಖ್ಯೆ:79 ಸರ್ವಜ್ಞನಗರ

ಅಧ್ಯಕ್ಷರು
ಡಾ॥ಮಹಮೂದ್ ಅಬ್ಬಾಸ್
ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:79-ಸರ್ವಜ್ಞನಗರ